

ಚಿತ್ರಪಟ ಕಥನ

# ಅಘನಾಶಿನಿ
## ಪ್ರಕೃತಿಯ ಮೌನ ಕಾವ್ಯ

ಅಘನಾಶಿನಿ ನದಿಯ ಹಿನ್ನೀರಿನಲ್ಲಿ ಬದುಕು ಕಟ್ಟಿಕೊಂಡಿರುವವರ ಸಾಹಸ ಯಾತ್ರೆ

■ ನಾಗರಾಜ್ ಬಿ.ಎನ್.

ಅಘನಾಶಿನಿ ಸಹ್ಯಾದ್ರಿಯ ಮಡಿಲಲ್ಲಿ ತನ್ನಷ್ಟಕ್ಕೆ ತಾನು ಮೌನವಾಗಿ ಹರಿಯುತ್ತಿರುವ ಜೀವನದಿ, ಮಾತೃಸ್ವರೂಪಿ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಶಂಕರ ಹೊಂಡದಲ್ಲಿ ಜೀವತಳೆದ ಇವಳು, 121 ಕಿ.ಮೀ. ದೂರದವರೆಗೆ ಪಶ್ಚಿಮಾಭಿಮುಖವಾಗಿ ಹರಿದು, ಬದುಕಿನ ಕಥೆಗಳನ್ನೆಲ್ಲ ಹೊತ್ತುಕೊಂಡು, ಅರಬ್ಬಿಯ ವಿಶಾಲ ಹೃದಯದಲ್ಲಿ ಲೀನವಾಗುತ್ತಾಳೆ. ಹರಿವಿನುದ್ದಕ್ಕೂ ನಿತ್ಯ ನವೀನಿಯಾಗಿ, ನಿತ್ಯ ಪರಿವರ್ತಿನಿಯಾಗಿ ಕಂಗೊಳಿಸುತ್ತಾಳೆ.

ನದಿಯಂಚಿನ ಗ್ರಾಮದ ವಾಸಿಗಳಿಗೆ ಅವಳು ಕೇವಲ ನೀರಿನ ಹರಿವಲ್ಲ, ಅಮ್ಮನ ಹಾಲಿನಂತೆ ಪಸಿರಿಗೆ ಜೀವ ತುಂಬುವ ಪ್ರಕೃತಿ. ಅವಳ ಮಡಿಲಲ್ಲಿ ಬೆಳೆದವರು, ಅವಳ ಒಡಲಲ್ಲಿನ ಕಪ್ಪೆಚಿಪ್ಪು–ಮೀನು, ಅವಳು ಕೊಡುವ ಜಲ, ಅವಳು ನೀಡುವ ನೆಮ್ಮದಿ... ಹೀಗೆ ಎಲ್ಲವನ್ನೂ ಅಮ್ಮ ಕೊಟ್ಟ ಮಮತೆಯ ಕೈತುತ್ತು ಎಂದು ನಮಿಸಿ ಕಣ್ಣೊತ್ತಿ ಸ್ವೀಕರಿಸುತ್ತಾರೆ. ಋತುಗಳಿಗೆ ತಕ್ಕಂತೆ ಅವಳು ರೂಪ ಬದಲಿಸುತ್ತಾಳೆ. ಮಳೆಯಾಗುತ್ತಿದ್ದಂತೆ ಮೈ ನೆರೆದ ವನಿತೆಯಂತೆ, ಕೆಂಪನೆಯ ಮೈಬಣ್ಣದಲ್ಲಿ ಕಂಗೊಳಿಸಿ ರಭಸದಿಂದ ಹರಿಯುತ್ತಾಳೆ. ಅವಳ ಸಂಗಮ ಸ್ಥಳದಲ್ಲಿ ಆಗ ಕಾಣಿಸುವುದು ರೌದ್ರ ನರ್ತನ. ಚಳಿಗಾಲದಲ್ಲಿ ಜಲಪಾತ್ರದಲ್ಲಿ ನಿಂತ ನವಿಲಿನ ಪ್ರತಿಬಿಂಬದಂತೆ, ನಿಶ್ಶಬ್ದವಾಗಿ ಹರಿಯುತ್ತಾಳೆ. ಬೇಸಿಗೆಯಲ್ಲಿ ಅರಬ್ಬಿಯ ಉಬ್ಬರ–ಇಳಿತಕ್ಕೆ ತಕ್ಕಂತೆ ಮೌನವಾಗಿ ಬದಲಾಗುತ್ತಾಳೆ. ಕೆಲವೊಮ್ಮೆ ಹರಿವಿನ ಕೊನೆಯಲ್ಲಿ ತಾನು ಖಾಲಿಯೆಂದು ಬಟಾಬಯಲಾಗುತ್ತಾಳೆ, ಕೆಲ ಹೊತ್ತಲ್ಲಿಯೇ ಮನೆಯಂಗಳದವರೆಗೂ ಉಸಿರು ಹರಡುತ್ತಾಳೆ.

ಮೂಡಣದ ಪರ್ವತದಿ ಮೇಲೇರಿ ಬರುವ ಕೆಂಪನೆಯ ಸೂರ್ಯ, ಅವಳ ಹರಿವಿನ ಮೇಲೆ ನಗು ಚೆಲ್ಲುತ್ತಾನೆ. ಸಂಜೆಗೆ, ಅದೇ ಕೆಂಬಣ್ಣ ಹೊತ್ತು ಪಡುಗಡಲಲ್ಲಿ ಕರಗುತ್ತಾನೆ. ಒಂದೆಡೆ ನಿಂತು ಕತ್ತು ಹೊರಳಾಡಿಸಿದರೆ ಸಾಕು, ಮುಂಜಾನೆ ಹಾಗೂ ಮುಸ್ಸಂಜೆ ಕವಿತೆಯ ಸಾಲುಗಳು ಒಳಗೊಳಗೆ ಗುನುಗಿಬಿಡುತ್ತವೆ, ತುಟಿಯಂಚಲ್ಲಿ ನಗು ಸೂಸುತ್ತ.

ಅಘನಾಶಿನಿಯು ಅರಬ್ಬಿ ಸೇರುವ ಸಂಗಮ ಸ್ಥಳ, ಕವಿ ಹೃದಯಿಗಳ ತಂಗುದಾಣ. ಒಂದೇ ಉಸಿರಲ್ಲಿ ಓದಿಕೊಂಡು ಹೋಗುವ ಅದ್ಭುತ ಕಾವ್ಯವೂ ಹೌದು. ಪ್ರಕೃತಿಪ್ರಿಯರಿಗೆ ಹೃದಯದ ಗುಂಜಿಯನ್ನು ಕಟ್ಟಿಕೊಡುವ ಸಂಗೀತ, ನೊಂದ ಹೃದಯಗಳಿಗೆ ತಾಯಿ ಹೊಕ್ಕು ಸವರಿದಂತೆ ಜೀವ ತುಂಬುವ ತಂಪಿನ ಸ್ಪರ್ಶ. ಅಲೆಗಳು ಬಂದು ಕಾಲಿಗೆ ತಾಕುವಾಗ ಅವು ‘ನಗು ಹುಡುಕು’ ಎಂದು ಹೇಳಿ ಮರಳಿದ ಗೆಳೆಯರಂತೆ!

ಬೆಳದಿಂಗಳ ರಾತ್ರಿಯಲ್ಲಿ ಅವಳ ಜೊತೆಗಿರುವುದೇ ಒಂದು ಭಾವಾತೀತ ಕ್ಷಣ. ಚಂದ್ರನ ಬೆಳಕು ನದಿ ಮೇಲಿನ ಜಲಪಟಲಕ್ಕೆ ತಗುಲಿ, ಬೆಳ್ಳಿಯ ಸೀರೆಯಾಗಿ ಪರಿವರ್ತಿತವಾಗುವುದನ್ನು ಕಣ್ತುಂಬಿಸಿಕೊಳ್ಳುವುದು, ಜೀವನದ ಅದ್ಭುತ

